# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2690
ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 25.03.2022.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಎಲೆಕ್ಟ್ರಿಕ್ ಬಸ್ ಖರೀದಿ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ; (ವಿವರ ನೀಡುವುದು) | ವಿದ್ಯುತ್ ವಾಹನಗಳ ತಂತ್ರಜ್ಞಾನ, ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದ ಕಾರಣ ಹಾಗೂ ವಿದ್ಯುತ್ ವಾಹನಗಳ ಖರೀದಿ ಬೆಲೆಯು ಅತಿ ದುಬಾರಿಯಾಗಿರುವುದರಿಂದ, ಸಾರಿಗೆ ನಿಗಮಗಳು ಸದರಿ ವಾಹನಗಳನ್ನು ನೇರವಾಗಿ ಸಾರಿಗೆ ಸಂಸ್ಥೆಗಳಿಂದ ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿ ಮಾಡುವ ಪ್ರಸ್ತಾವನೆ ಇರುವುದಿಲ್ಲ.<br><br>**ಕ.ರಾ.ರ.ಸಾ.ನಿಗಮ:**<br><br>ಭಾರತ ಸರ್ಕಾರವು ಜಾರಿಗೆ ತಂದಿರುವ ಫೇಮ್-2 ಯೋಜನೆಯಡಿಯಲ್ಲಿ ಕಾರ್ಯಾಚರಣೆ ವೆಚ್ಚದೊಂದಿಗೆ ಹೊರಗಿನ ಆಪರೇಟರ್ ಮೂಲಕ ಗುತ್ತಿಗೆ ಆದಾರದ ಮೇಲೆ ಕಾರ್ಯಾಚರಣೆಗೊಳಿಸಲು ಉದ್ದೇಶಿಸಿದ್ದು, ಈ ಯೋಜನೆಯಂತೆ ನಿಗಮಕ್ಕೆ ಪ್ರೋತ್ಸಾಹಧನದೊಂದಿಗೆ ಅಂತರನಗರ ಸಾರಿಗೆಗಾಗಿ (Intercity) ಮಂಜೂರಾಗಿರುವ 50 ವಿದ್ಯುತ್ ವಾಹನಗಳಿಗೆ ಟೆಂಡರ್ ಮೂಲಕ ಆಪರೇಟರ್ ಅಂತಿಮಗೊಳಿಸಿ, ಸರಬರಾಜು ಆದೇಶ ನೀಡಲಾಗಿದ್ದು, ಮುಂಬರುವ ತಿಂಗಳುಗಳಲ್ಲಿ ಆಚರಣೆ ಮಾಡುವ ಕಾರ್ಯಕ್ರಮ ಹೊಂದಿರುತ್ತದೆ.<br><br>**ಬೆಂ.ಮ.ಸಾ.ಸಂಸ್ಥೆ:**<br><br>ಸಂಸ್ಥೆಯು ಗುತ್ತಿಗೆ ಆಧಾರದ (Gross Cost Contract) ಮೇಲೆ 90 ಸಂಖ್ಯೆ 9 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಮೆ\|\| ಎನ್.ಟಿ.ಪಿ.ಸಿ. ವಿದ್ಯುತ್ ವ್ಯಾಪಾರ ನಿಗಮ ಲಿಮಿಟೆಡ್‌ರವರಿಂದ ಹಾಗೂ 300 ಸಂಖ್ಯೆ 12 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಕೇಂದ್ರ ಸರ್ಕಾರದ ಫೇಮ್-2 ಯೋಜನೆ ಅಡಿಯಲ್ಲಿ, ಮೆ\|\| ಅಶೋಕ್ ಲೇಲ್ಯಾಂಡ್/ಮೆ\|\| ಸ್ವಿಚ್ ಮೊಬಿಲಿಟಿ |



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:27 PM

| | | |
|---|---|---|
| | | ಆಟೋಮೊಟಿವ್ ಲಿಮಿಟೆಡ್‌ರವರಿಂದ ಆಚರಣೆ ಮಾಡಲು ಕಾರ್ಯಾದೇಶಿಸಿದೆ.<br><br>**ವಾ.ಕ.ರ.ಸಾ.ಸಂಸ್ಥೆ:**<br><br>ಭಾರತ ಸರ್ಕಾರದ FAME-II ಯೋಜನೆ ಅಡಿಯಲ್ಲಿ, GCC ಆಧಾರದ ಮೇಲೆ 50 ವಿದ್ಯುತ್ ಬಸ್‌ಗಳನ್ನು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಕಾರ್ಯಾಚರಣೆಗೊಳಿಸಲು ಸಂಸ್ಥೆಯ ಆಡಳಿತ ಮಂಡಳಿ ತೀರ್ಮಾನಿಸಿದ್ದು, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕೇಂದ್ರ ಸರ್ಕಾರದಿಂದ ಕಾಲಾವಧಿ ವಿಸ್ತರಣೆಗಾಗಿ ಕೋರಲಾಗಿರುತ್ತದೆ.<br><br>**ಕ.ಕ.ರ.ಸಾ.ನಿಗಮ:**<br><br>ನಿಗಮದಲ್ಲಿ ವಿದ್ಯುತ್ ಚಾಲಿತ ಬಸ್ಸುಗಳನ್ನು ಖರೀದಿಸಲು ಕೇಂದ್ರ ಸರ್ಕಾರದ ಪ್ರಾಯೋಜತ್ವದ ಫೇಮ್-2 ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆಗೆ ಕೋರಿದ್ದು, ಆದರೆ ಕ.ಕ.ರ.ಸಾ ನಿಗಮದ ನಗರ/ಪಟ್ಟಣಗಳು ಫೇಮ್-2 ಯೋಜನೆಯ ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ ಯಾವುದೇ ಅನುದಾನ/ಸಬ್ಸಿಡಿ ಮಂಜೂರಾಗಿರುವುದಿಲ್ಲ.<br><br>ನಿಗಮಕ್ಕೆ ವಿದ್ಯುತ್ ಬಸ್‌ಗಳನ್ನು ಖರೀದಿಸಲು ಅನುದಾನ ನೀಡುವಂತೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಕೋರಲಾಗಿ, ರೂ.4.00 ಕೋಟಿ ಅನುದಾನವನ್ನು ಮಂಜೂರು ಮಾಡಿ ತದನಂತರ ಸದರಿ ಅನುದಾನವನ್ನು ಮಂಡಳಿಯಿಂದ ಬೇರೆ ಯೋಜನೆಗೆ ವರ್ಗಾಯಿಸಲಾಗಿರುತ್ತದೆ.<br><br>ವಿದ್ಯುತ್ ವಾಹನಗಳ ದರವು ಡೀಸೆಲ್ ವಾಹನಗಳ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿದ್ದು, ಪ್ರಸ್ತುತ ನಿಗಮದ ಆರ್ಥಿಕ ಸ್ಥಿತಿಗತಿ ಸರಿ ಇಲ್ಲದೇ ಇರುವುದರಿಂದ ನಿಗಮದ ಆಂತರಿಕ ಸಂಪನ್ಮೂಲದಿಂದ ವಿದ್ಯುತ್ ವಾಹನಗಳನ್ನು ಖರೀದಿಸುವುದು ಕಷ್ಟಸಾಧ್ಯವಾಗಿರುತ್ತದೆ. |
| ಆ. | ಈ ಬಸ್‌ಗಳನ್ನು ರಾಜ್ಯದ ಯಾವ ಯಾವ ಮಹಾನಗರ ಪಾಲಿಕೆಗಳಿಗೆ ಹಂಚಿಕೆ | **ಕ.ರಾ.ರ.ಸಾ.ನಿಗಮ:**<br><br>50 ವಿದ್ಯುತ್ ವಾಹನಗಳನ್ನು ಈ ಕೆಳಕಂಡ |



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:27 PM

| | | |
|---|---|---|
| | ಮಾಡಲಾಗುವುದು; (ವಿವರ ನೀಡುವುದು) | ನಗರಗಳಿಗೆ ಪ್ರತಿದಿನ ಆಚರಣೆ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ:<br>• ಬೆಂಗಳೂರು – ಮೈಸೂರು - 08<br>• ಬೆಂಗಳೂರು – ಶಿವಮೊಗ್ಗ - 10<br>• ಬೆಂಗಳೂರು – ಚಿಕ್ಕಮಗಳೂರು – 05<br>• ಬೆಂಗಳೂರು – ವಿರಾಜಪೇಟೆ - 05<br>• ಬೆಂಗಳೂರು – ಮಡಿಕೇರಿ - 07<br>• ಬೆಂಗಳೂರು – ದಾವಣಗೆರೆ - 15<br>**ಬೆಂ.ಮ.ಸಾ.ಸಂಸ್ಥೆ:**<br>ಗುತ್ತಿಗೆ ಆಧಾರದ ಮೇರೆಗೆ ಪಡೆದ ಎಲೆಕ್ಟ್ರಿಕ್ ಬಸ್ಸುಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯ ವ್ಯಾಪ್ತಿಯಲ್ಲಿ ಆಚರಣೆ ಮಾಡಲಾಗುವುದು.<br>**ವಾ.ಕ.ರ.ಸಾ.ಸಂಸ್ಥೆ:**<br>ಕೇಂದ್ರ ಸರ್ಕಾರವು ಕಾಲಾವಧಿ ವಿಸ್ತರಿಸಿದಲ್ಲಿ, ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಕಾರ್ಯಾಚರಣೆಗೊಳಿಸಲು ಉದ್ದೇಶಿಸಲಾಗಿದೆ.<br>**ಕ.ಕ.ರ.ಸಾ.ನಿಗಮ :**<br>ಅನ್ವಯಿಸುವುದಿಲ್ಲ |
| ಇ. | ಮೈಸೂರು ಮಹಾನಗರವು ಸವಿಸ್ತಾರವಾಗಿ ಬೆಳವಣಿಗೆ ಹೊಂದುತ್ತಿರುವುದರಿಂದ, ಸಾಂಸ್ಕೃತಿಕ ನಗರಿ, ಅರಮನೆ ನಗರಿ ಎಂದು ವಿಶ್ವ ಪ್ರಖ್ಯಾತಿ ಪಡೆದಿರುವುದರಿಂದ ಮೈಸೂರು ಮಹಾನಗರಕ್ಕೂ ಈ ಬಸ್ ಗಳನ್ನು ಹಂಚಿಕೆ ಮಾಡಲಾಗುವುದೇ; ಈ ಬಗ್ಗೆ ಸರ್ಕಾರದ ನಿಲುವೇನು? | ಮೈಸೂರು ಮಹಾನಗರ ವ್ಯಾಪ್ತಿಯಲ್ಲಿ ಪ್ರಸ್ತುತ ಆಚರಣೆ ಮಾಡುವ ಉದ್ದೇಶ ಹೊಂದಿರುವುದಿಲ್ಲ. ಆದರೆ, ಬೆಂಗಳೂರು – ಮೈಸೂರು ನಡುವೆ ಪ್ರತಿ ದಿನ 24 ಸುತ್ತುವಳಿ ಆಚರಿಸಲಾಗುವುದು.<br>ಮುಂದುವರೆದು, ಬೆಂಗಳೂರು-ವೀರಾಜಪೇಟೆ ಮತ್ತು ಬೆಂಗಳೂರು-ಮಡಿಕೇರಿ ನಡುವೆ ಪ್ರತಿ ದಿನ 24 ಸುತ್ತುವಳಿ ಆಚರಿಸಲಾಗುವುದು. ಈ ವಾಹನಗಳು ಸಹ ಮೈಸೂರು ಮೂಲಕ ಹಾದು ಹೋಗುವುದರಿಂದ ಮೈಸೂರು ಮಹಾನಗರಕ್ಕೆ ಹೆಚ್ಚುವರಿ ಸೌಲಭ್ಯ ಸಿಗಲಿದೆ. |

ಸಂಖ್ಯೆ: ಟಿಡಿ 139 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:27 PM